

# ಮಾಯಾಕನ್ನಡಿಯ ನಿಸ್ತೇಜ ಬಿಂಬ

**ನಾಳೆ ಏನಾಗುತ್ತದೆ ಎಂಬ ರಹಸ್ಯವನ್ನು ಯಾರಾದರೂ ಭೇದಿಸಿದರೆ ಏನಾಗಬಹುದು? ಈ ಗಹನವಾದ ಪ್ರಶ್ನೆಯನ್ನು ಎತ್ತಿಕೊಂಡು ತುಸು ಪೇಲವವಾಗಿಯೇ ನಿರೂಪಣೆಗೊಂಡಿರುವ ಕಿರುಚಿತ್ರವಿದು.**

■ ಗೌರಿ

‘ನಾಳೆ ಏನಾಗುತ್ತದೆ ಎಂಬುದರ ಸುಳಿವು ಈವತ್ತೇ ಸಿಕ್ಕಿದರೆ ಆಗ ಮನುಷ್ಯನ ಜಗತ್ತು ಹೇಗಿರಬಹುದು?’

ಈ ಪ್ರಶ್ನೆಯನ್ನು ಇಟ್ಟುಕೊಂಡು ಹಲವಾರು ಕಥೆ, ಕಾದಂಬರಿಗಳು, ಸಿನಿಮಾಗಳು, ಕಲಾಕೃತಿಗಳು ಬಂದಿವೆ. ಬರುತ್ತಲೇ ಇವೆ. ನಾಳೆಯನ್ನು ಅರಿತುಕೊಳ್ಳುವುದೆಂದರೆ ಸಾವಿನ ಗುಟ್ಟನ್ನು ಒಡೆದ ಹಾಗೆಯೇ. ಅದು ಸೃಷ್ಟಿಯ ಗುಟ್ಟೂ ಆಗಿರುವುದರಿಂದ ಇಡೀ ಜಗತ್ತಿನ ಲೆಕ್ಕಾಚಾರಗಳೆಲ್ಲವೂ ಅಲ್ಲಿ ಬದಲಾಗಿಬಿಡುತ್ತವೆ. ಅಲ್ಲೊಂದು ಥ್ರಿಲ್ ಇದೆ, ತತ್ವ ಇದೆ, ಕುತೂಹಲವಿದೆ, ದುರಂತವೂ ಇದೆ. ಆದರೆ ಇದೆಲ್ಲವು ಇದ್ದೂ ಬದುಕಿನ ಚೌಕಟ್ಟಿನಲ್ಲಿ ಇಟ್ಟು ನೋಡಿದಾಗ ಮಾತ್ರ ಮತ್ತೊಂದೇ ಆಗಿ ಹೊಳೆಯುತ್ತವೆ. ಇಲ್ಲವಾದರೆ ಆ ಕ್ಷಣದ ಥ್ರಿಲ್ ಕೊಡುವುದರಲ್ಲಿಯೇ ಮುಗಿದುಹೋಗುತ್ತದೆ.

ಕ್ರಿತ್ವಿಕ್ ನಿರ್ದೇಶನದ ಕಿರುಚಿತ್ರ ‘ಎಂ.ಆರ್. ಎಫ್.’ ಈ ಕಿರುಚಿತ್ರವೂ ಭವಿಷ್ಯವನ್ನು ತಿಳಿದ ಮನುಷ್ಯನ ಪಾಡನ್ನು ಥ್ರಿಲ್ಲರ್ ಜಾಡಿನಲ್ಲಿ ಹೇಳುತ್ತದೆ.

ಕಥೆಯ ನಾಯಕ ಒಬ್ಬ ನಿರುದ್ಯೋಗಿ. ಮನೆಯಲ್ಲಿ ಸಾಕಷ್ಟು ಸ್ಥಿತಿವಂತರೇ ಆಗಿದ್ದರೂ ಅಪ್ಪನ ನೆರಳಲ್ಲಿ ಬದುಕಲಾರೆ ಎಂದು ನಿರ್ಧರಿಸಿ ನಗರಕ್ಕೆ ಬಂದು ಕೆಲಸ ಹುಡುಕುತ್ತಿದ್ದಾನೆ. ಆದರೆ ಯಾವ ಕೆಲಸವೂ ಸಿಗುತ್ತಿಲ್ಲ. ಯಾಕೆಂದರೆ ಎಲ್ಲರಿಗೂ ಚಿನ್ನದ ಮೊಟ್ಟೆ ಇಡುವ ಕೋಳಿಯೇ ಬೇಕು.

ಅವನ ರೂಮಿನಲ್ಲಿ ಇದ್ದಕ್ಕಿದ್ದ ಹಾಗೆ ಒಂದು ದಿನ ಒಂದು ಕನ್ನಡಿ ಕಾಣಿಸಿಕೊಳ್ಳುತ್ತದೆ. ಆ ಕನ್ನಡಿಯನ್ನು ಮುಟ್ಟಹೋದರೆ ಅದರಲ್ಲಿ ಅವನ ಭವಿಷ್ಯವನ್ನು ಸೂಚಿಸುವ ಅವನದೇ ಬಿಂಬ ಮೂಡುತ್ತದೆ.

ಹೀಗೆ ಬದುಕಿನಲ್ಲಿ ಸೋತು ಕುಸಿಯುವ ಹಂತದಲ್ಲಿದ್ದಾಗಲೇ ಅವನಿಗೆ ಅಚಾನಕ್ಕಾಗಿ ಒಂದು ಹಣದ ಸೂಟ್‌ಕೇಸ್ ಸಿಗುತ್ತದೆ. ಆ ಹಣವನ್ನು ಕಳೆದುಕೊಂಡಿರುವ ಖಳರ ಗುಂಪೂ ಅವನ ಹಿಂದೆ ಬೀಳುತ್ತಾರೆ. ಆನಂತರ ಅವನ ಬದುಕಿನಲ್ಲಿ ಏನಾಗುತ್ತದೆ ಎನ್ನುವುದೇ ಈ ಚಿತ್ರದ ಹೂರಣ.

ಕಥೆಯ ವಸ್ತುವಿನಲ್ಲಿ ಒಮ್ಮೊಂದೊಮ್ಮೆಲೇ ಹಣ ಮಾಡುವ ಉತ್ಸಾಹ ಮತ್ತು ನಾಳೆ ಏನಾಗುತ್ತದೆ ಎಂಬುದನ್ನು ತಿಳಿಯಬಲ್ಲ ಮಾಯಾವಿ ಕನ್ನಡಿ ಈ ಎರಡು ತುಂಬ ಗಟ್ಟಿಯಾದ ಕೇಂದ್ರಗಳಿವೆ. ಆದರೆ ಅವೆರಡನ್ನೂ ಒಂದಿಲ್ಲದೇ ಇನ್ನೊಂದಿಲ್ಲ ಎನ್ನುವ ರೀತಿ ಸೇರಿಸಿ ಜೋಡಿಸುವಲ್ಲಿ, ಅದರ ಮೂಲಕ ಬದುಕಿನ ಒಳಹೊಳಹುಗಳನ್ನು ಕಾಣಿಸುವಲ್ಲಿ ನಿರ್ದೇಶಕರು ಯಶಸ್ವಿಯಾಗಿಲ್ಲ. ಹಾಗಾಗಿ ನಾಳೆಯನ್ನು ಊಹಿಸುವ ಕನ್ನಡಿಯೂ, ದಣಿದಿರುವ ನಿರುದ್ಯೋಗಿ ಹುಡುಗನಿಗೆ ಸಿಕ್ಕ ಹಣದ ಸೂಟ್‌ಕೇಸೂ ಎರಡೂ ಪ್ರತ್ಯೇಕವಾಗಿಯೇ ಬೆಳೆಯುತ್ತವೆ. ಭವಿಷ್ಯವನ್ನು ಹೇಳುವ ಕನ್ನಡಿ ಇಲ್ಲದಿದ್ದರೆ ಆ ಇಡೀ ಕಥೆಯಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಆಗುತ್ತಿರಲಿಲ್ಲ. ಚಿತ್ರದ ಕೊನೆಯಲ್ಲಿ ಕನ್ನಡಿಯನ್ನು ತೆಗೆದುಕೊಂಡು ಹೋಗಿ ಹೊಳೆಯಲ್ಲಿ ಎಸೆಯುವುದು ಆ ಹುಡುಗನ ಸಮಸ್ಯೆಗೆ ಹೇಗೆ ಪರಿಹಾರವಾದೀತು ಎಂಬುದೂ ಅರ್ಥವಾಗುವುದಿಲ್ಲ. ತನ್ನ ಸಾವಿನ ಸೂಚನೆ ಸಿಕ್ಕವನು ಕನ್ನಡಿಯನ್ನು ಹೊಳೆಗೆ ಎಸೆಯುವುದೇ ದೊಡ್ಡ ಕೆಲಸವೆಂಬಂತೆ ಮಾಡುವುದು ಅಸಹಜವೆನಿಸುತ್ತದೆ. ಖಳರಲ್ಲೊಬ್ಬನಿಗೆ ಮುಸ್ಲಿಮ್ ಚಹರೆ ಕೊಟ್ಟಿದ್ದು, ಖಳನಾಯಕ ಮಾಂಸಾಹಾರವನ್ನು ಸೇವಿಸುತ್ತಿರುವುದೆಲ್ಲವೂ ಈಗಾಗಲೇ ಸ್ಥಾಪಿತವಾಗಿರುವ ಪೂರ್ವಗ್ರಹದ ಇಮೇಜ್‌ಗಳಿಗೇ ಜೋತುಬೀಳುವ ನಿರ್ದೇಶಕರ ಜಡ ಮನಸ್ಥಿತಿಯನ್ನು ಸೂಚಿಸುತ್ತದಷ್ಟೆ.

ಕಥೆಯ ಶಿಲ್ಪದಲ್ಲಿಯಷ್ಟೇ ಅಲ್ಲ, ನಟನೆಯಲ್ಲಿ, ತಾಂತ್ರಿಕತೆಯಲ್ಲಿಯೂ ಕಿರುಚಿತ್ರ ಶಿಥಿಲವಾಗಿಯೇ ಇದೆ. ಬರವಣಿಗೆಯಲ್ಲಿ ಇನ್ನಷ್ಟು ಶ್ರಮ ಹಾಕಿದ್ದರೆ ಈ ಕಿರುಚಿತ್ರಕ್ಕೆ ಖಂಡಿತವಾಗಿಯೂ ಹೊಸ ಸಾಧ್ಯತೆಗಳಿದ್ದವು. ಥ್ರಿಲ್ಲರ್ ಕಥೆ ಹೇಳುತ್ತಲೇ, ಸೃಷ್ಟಿಯ ನಿಗೂಢವನ್ನು ಭೇದಿಸಿದ ಮನುಷ್ಯನ ಬದುಕು ದುರಂತಮಯವೇ ಆಗುವ ವಿಪರ್ಯಾಸವನ್ನು ಮನಮುಟ್ಟುವಂತೆ ದಾಟಿಸಬಹುದಿತ್ತು. ಆದರೆ ಇಲ್ಲಿ ಅದಾವುದೂ ಆಗಿಲ್ಲ. ಹಾಗಾಗಿ ‘ಎಂ.ಆರ್.ಎಫ್.’ ಹಲವು ಸಾಧ್ಯತೆಗಳನ್ನು ಇಟ್ಟುಕೊಂಡು, ಅವ್ಯಾವುದನ್ನೂ ಶೋಧಿಸದ ಸಾಮಾನ್ಯ ಕಿರುಚಿತ್ರವಷ್ಟೇ ಆಗಿ ಉಳಿದುಬಿಟ್ಟಿದೆ.

**ಹೆಸರು:** ಎಂ.ಆರ್.ಎಫ್.
**ನಿರ್ಮಾಣ:** ನಾರಾಯಣ್ ಸ್ವಾಮಿ, ಮುನಿರಾಜು
**ನಿರ್ದೇಶನ:** ಕ್ರಿತ್ವಿಕ್
**ಸಂಕಲನ:** ವಿಜಯ್ ಎಂ. ಕುಮಾರ್
**ಛಾಯಾಗ್ರಹಣ:** ಆಶಿಕ್ ಎಂ.
**ತಾರಾಗಣ:** ಮುಕುಂದ ರಾಮಸ್ವಾಮಿ, ಭೈರವ್ ಆಶ್ರಿತ್, ಶರತ್ ಯುವನ್, ವಿನೋದ್ ರಾವ್ ಬಿ.ಆರ್

ಈ ಕಿರುಚಿತ್ರ ವೀಕ್ಷಣೆಗೆ https://bit.ly/2VDLZyl ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.